ನಿಮ್ಮೊಡನೆ

# ಉನ್ಮಾದದ ಒರತೆ, ಬತ್ತಿಹೋದ ಮಾನವತೆ

> ಆರ್‌ಸಿಬಿ ತಂಡ ಚಾಂಪಿಯನ್ ಆದ ದಿನದ ನಡುರಾತ್ರಿಯೇ ಜನರು ರಸ್ತೆಗಿಳಿದಿದ್ದರು. ಪಟಾಕಿ ಸಿಡಿಸಿ, ಉನ್ಮಾದದಿಂದ ಕೂಗಿ ಬೆಳಗಿನ ಜಾವದವರೆಗೆ ಅನೇಕರ ನಿದ್ದೆಗೆಡಿಸಿದ್ದರು. ಹೀಗಿದ್ದೂ ಸರ್ಕಾರ ಖಾಸಗಿ ಕ್ರಿಕೆಟ್ ತಂಡದ ಗೆಲುವೊಂದನ್ನು ತಾನೇ ಮುಂದೆ ನಿಂತು, ಅದೂ ವಿಧಾನಸೌಧದ ಎದುರು ಸಂಭ್ರಮಿಸಲು ಹೊರಟಿದ್ದು ವಿವೇಚನೆ ಇಲ್ಲದ ನಡೆ.


ಈಶ್ವರ್

ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಮುಖ್ಯ ಗೇಟಿನ ಸಮೀಪದಲ್ಲಿ ಜನಸಾಗರವನ್ನು ಸೀಳಿಕೊಂಡು ಆಂಬುಲೆನ್ಸ್ ಸಾಗಿತ್ತು. ಜನರ ಕೇಕೆಯ ಕಿವಿಗಡಚಿಕ್ಕುವ ದನಿಯ ಎದುರು ಆಂಬುಲೆನ್ಸ್ ಸೈರನ್ ಕೂಡ ಕ್ಷೀಣ. ಆ ಆಂಬುಲೆನ್ಸ್ ಬಂದದ್ದಾದರೂ ಏಕೆ; ಅದೂ ಆ ಸಂದರ್ಭದಲ್ಲಿ ಅಲ್ಲಿಗೆ ಎಂಬ ವಿವೇಕದ ಪ್ರಶ್ನೆಯು ಉನ್ಮಾದದಲ್ಲಿ ಕೂಗುತ್ತಿದ್ದ ಯಾರಲ್ಲೂ ಮೂಡಲಿಲ್ಲ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನ 18ನೆಯ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಚಾಂಪಿಯನ್ ಆಯಿತು. ಜೂನ್ 4ರಂದು ವಿಧಾನಸೌಧದ ಮೆಟ್ಟಿಲುಗಳ ಮೇಲೆ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತಂಡವನ್ನು ಸನ್ಮಾನಿಸುವ ಸಂಭ್ರಮಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆ ಸಂದರ್ಭದಲ್ಲಿ ಆಂಬುಲೆನ್ಸ್ ಸದ್ದನ್ನೇ ಅಡಗಿಸಿದ 'ಆರ್‌ಸಿಬಿ... ಆರ್‌ಸಿಬಿ' ಶಬ್ದದ ಅನುರಣನ ಈ ಹೊತ್ತಿನ ದೃಷ್ಟಾಂತದಂತೆ ಕಾಣುತ್ತದೆ.

ಸಂಭ್ರಮದ ಕಾರ್ಯಕ್ರಮ ನಿಮಿಷಗಳಲ್ಲೇ ಸೂತಕದ ವಾತಾವರಣವನ್ನು ಮೂಡಿಸಿದ್ದು ದುರದೃಷ್ಟಕರ. ನೂಕುನುಗ್ಗಲು, ಕಾಲ್ತುಳಿತದಿಂದ 11 ಜೀವಗಳು ಇನ್ನಿಲ್ಲವಾದವು. 30ಕ್ಕೂ ಹೆಚ್ಚು ಮಂದಿ ಗಾಯಗೊಂಡು ಆಸ್ಪತ್ರೆ ಸೇರುವಂತಾಯಿತು. ಬೆಂಗಳೂರಿನಲ್ಲಿ ಇತ್ತೀಚಿನ ವರ್ಷಗಳಲ್ಲೇ ನಡೆದ ಅತಿ ದೊಡ್ಡ ಪ್ರಮಾಣದ ದುರಂತವಿದು. ಇದಕ್ಕೆ ಸರ್ಕಾರ, ಆರ್‌ಸಿಬಿ ತಂಡದ ವ್ಯವಸ್ಥಾಪಕರು ಹಾಗೂ ನಿರ್ವಹಣಾ ಸಂಸ್ಥೆಯ ಬೇಜವಾಬ್ದಾರಿತನವೇ ಕಾರಣ. ಪ್ರಕರಣದ ತೀವ್ರತೆಯನ್ನು ಅರಿತು ಹೈಕೋರ್ಟ್ ಸ್ವಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡು, ಸರ್ಕಾರಕ್ಕೆ ನೋಟಿಸ್ ನೀಡಿತು. ಬೆಂಗಳೂರು ಪೊಲೀಸ್ ಕಮಿಷನರ್ ಅವರನ್ನೇ ಮುಖ್ಯಮಂತ್ರಿ ಅಮಾನತು ಮಾಡುವ ಪರಿಸ್ಥಿತಿ ಸೃಷ್ಟಿಯಾಯಿತು. ಎಡಿಜಿಪಿ ದರ್ಜೆಯ ಪೊಲೀಸ್ ಅಧಿಕಾರಿಯೊಬ್ಬರು ನಗರದಲ್ಲಿ ಹೀಗೆ ಅಮಾನತುಗೊಂಡಿರುವುದು ಇದೇ ಮೊದಲು.

ಆರ್‌ಸಿಬಿ ತಂಡವು ಚಾಂಪಿಯನ್ ಆದ ದಿನದ ನಡುರಾತ್ರಿಯೇ ಜನರು ರಸ್ತೆಗಿಳಿದಿದ್ದರು. ಪಟಾಕಿ ಸಿಡಿಸಿ, ಉನ್ಮಾದದಿಂದ ಕೂಗಿ ಬೆಳಗಿನ ಜಾವದವರೆಗೆ ಅನೇಕರ ನಿದ್ದೆಗೆಡಿಸಿದ್ದರು. ಆ ಹುಚ್ಚುತನದ ವಿಡಿಯೊಗಳು ಕೂಡ ಹರಿದಾಡಿದ್ದವು. ಹೀಗಿದ್ದೂ ಸರ್ಕಾರ ಖಾಸಗಿ ಕ್ರಿಕೆಟ್ ತಂಡದ ಗೆಲುವೊಂದನ್ನು ತಾನೇ ಮುಂದೆ ನಿಂತು, ಅದೂ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಂಭ್ರಮಿಸಲು ಹೊರಟಿದ್ದು ವಿವೇಚನೆ ಇಲ್ಲದ ನಡೆ. ಆ ಸಂಭ್ರಮದಲ್ಲಿ ಮಂತ್ರಿ ಮಹೋದಯರ ಕುಟುಂಬಸ್ಥರು ಕೂಡ ಪಾಲ್ಗೊಂಡು, ಕ್ರಿಕೆಟಿಗರ ಜೊತೆ ನಿಂತು ಫೋಟೊಗಳನ್ನು ತೆಗೆಸಿಕೊಂಡರು. ಸಾವುಗಳು ಸಂಭವಿಸಿದ ಸಂದರ್ಭದಲ್ಲಿಯೇ ಜನಪ್ರತಿನಿಧಿಗಳ ಕುಟುಂಬದವರು ಹೀಗೆ ವರ್ತಿಸಿರುವುದು ಮಾನವತೆ ಇಲ್ಲವಾಗಿದೆಯೇ ಎಂಬ ಮುಖ್ಯ ಪ್ರಶ್ನೆಯನ್ನು ಮುಂದಿಟ್ಟಿದೆ.

ಚುಟುಕು ಕ್ರಿಕೆಟ್ ತಂಡವೊಂದರ ಅಭಿಮಾನಿಗಳ ಈ ಉನ್ಮಾದ ನೋಡಿದರೆ ಗ್ರೀಕರ ಕಾಲದ ಗ್ಲಾಡಿಯೇಟರ್‌ಗಳ ಕಾದಾಟದ ಮನರಂಜನಾ ವೈಖರಿ ನೆನಪಿಗೆ ಬರುತ್ತದೆ. ತರಬೇತಿಗೊಳಿಸಿದ, ಬಹುತೇಕ ಗುಲಾಮರ ನಡುವೆ ರೋಮ್‌ನಲ್ಲಿ ನಡೆಯುತ್ತಿದ್ದ ಕಾದಾಟ ಪ್ರೇಕ್ಷಕರ ಪಾಲಿಗೆ ಹಿಂಸಾವಿನೋದವಾಗಿತ್ತು. ಇತ್ತೀಚಿನ ಕಾಲ್ತುಳಿತ ಪ್ರಸಂಗವು ಅಂಥದ್ದೇ ಹಿಂಸಾವಿನೋದದ ಇನ್ನೊಂದು ಬಗೆಯನ್ನು ತೆರೆದಿಟ್ಟಿದೆ.

ಹಾಗೆ ನೋಡಿದರೆ, ಸಾಂಪ್ರದಾಯಿಕ ಟೆಸ್ಟ್ ಕ್ರಿಕೆಟ್ ಪ್ರೇಮಿಗಳಿಗೆ ಈ ಚುಟುಕು ಕ್ರಿಕೆಟ್ ಅಂದರೆ ಅಷ್ಟಕ್ಕಷ್ಟೆ. ಅದಕ್ಕೆ ಕಾರಣ– ಕ್ರಿಕೆಟ್‌ನ ಎಲ್ಲ ವಿಭಾಗಗಳ ಕೌಶಲ ಕಟ್ಟಿಕೊಡುವ ಗಟ್ಟಿತನವು ಇದರಲ್ಲಿ ಇಲ್ಲ ಎನ್ನುವುದು. ಅಸಾಂಪ್ರದಾಯಿಕ ಶೈಲಿಯ ಹೊಡೆತಗಳ ಮೂಲಕ ಬ್ಯಾಟ್ಸ್‌ಮನ್‌ಗಳು ಹೆಚ್ಚಾಗಿ ವಿಜೃಂಭಿಸುವ ಸ್ವರೂಪದ ಕ್ರಿಕೆಟ್ ಐಪಿಎಲ್. ಬೌಲರ್‌ಗಳು ಹೈರಾಣಾಗುವ ಸಂದರ್ಭಗಳೇ ಇದರಲ್ಲಿ ಹೇರಳ. ನಿಯಮಗಳು ಕೂಡ ಅದಕ್ಕೆ ಪೂರಕವಾಗಿಯೇ ಇರುತ್ತವೆ. ಇಂತಹ ಹೊಡಿ– ಬಡಿ ಕ್ರಿಕೆಟ್ ನೋಡುತ್ತಾ ಬೆಳೆದ ಯುವಜನತೆ ಸಾರ್ವಜನಿಕವಾಗಿ ವರ್ತಿಸಿದ ರೀತಿ ರೇಜಿಗೆ ಹುಟ್ಟಿಸುವಂಥದ್ದು. ತಂಡದ ಮೂಲ ಮಾಲೀಕ ವಿಜಯ್ ಮಲ್ಯ ಅವರು ಶುಭ ಕೋರಿ ಪೋಸ್ಟ್ ಒಂದನ್ನು ಹಾಕಿದ್ದರು. ಅದಕ್ಕೆ ಮೆಚ್ಚುಗೆ ಸೂಸುವ ಭರದಲ್ಲಿ, ಅನೇಕರು ಮಲ್ಯ ಅವರನ್ನೇ ಕೊಂಡಾಡಿದರು. ಇದು ನೈತಿಕ ಅಧಃಪತನದ ಪರಮಾವಧಿ.

ಆರ್‌ಸಿಬಿ ತಂಡವು ಇದೇ ಮೊದಲ ಬಾರಿಗೆ ಚಾಂಪಿಯನ್ ಆಯಿತು. 18 ವರ್ಷಗಳಿಂದ ಈ ಕ್ಷಣಕ್ಕಾಗಿ ಅಭಿಮಾನಿಗಳು ಕಾತರರಾಗಿದ್ದರು. ಇಷ್ಟು ದೊಡ್ಡ ಪ್ರಮಾಣದ ಅಭಿಮಾನಿ ಬಳಗವು ವಿಶ್ವದಲ್ಲೇ ಯಾವ ಕ್ರಿಕೆಟ್ ತಂಡಕ್ಕೂ ಇಲ್ಲ. ಇನ್‌ಸ್ಟಾಗ್ರಾಂ ಒಂದೇ ವೇದಿಕೆಯಲ್ಲಿ ಈ ತಂಡಕ್ಕೆ 2 ಕೋಟಿ 10 ಲಕ್ಷ ಫಾಲೋವರ್‌ಗಳು ಇದ್ದಾರೆ. ಆರ್‌ಸಿಬಿ ತಂಡದ ವ್ಯವಸ್ಥಾಪಕರು, ಸಂಭ್ರಮೋತ್ಸವ ನಡೆಸುವುದಾಗಿ ತಾವೇ ಮೊದಲು ಸಾಮಾಜಿಕ ಮಾಧ್ಯಮದಲ್ಲಿ ಡಂಗುರ ಹೊಡೆದರು. ಅದು ವೈರಲ್ ಆಗಲು ಎಷ್ಟು ಹೊತ್ತು? ಜನ ಪ್ರವಾಹೋಪಾದಿಯಲ್ಲಿ ಹರಿದುಬಂದದ್ದು ಅದೇ ಕಾರಣಕ್ಕೆ. ಕಾಲ್ತುಳಿತದಲ್ಲಿ ಮೃತಪಟ್ಟ ಎಲ್ಲರೂ ನಲವತ್ತು ದಾಟದವರು. ಮೃತರ ಒಂದೊಂದೂ ಸೂತಕದ ಮನೆಯಲ್ಲಿ ಬೇರೆಯದೇ ಮನಕಲಕುವ ವಾಸ್ತವ ಹೊರಬರುತ್ತಿದೆ. ಬುದ್ಧಿಯನ್ನು ಸ್ಥಿಮಿತದಲ್ಲಿ ಇಟ್ಟುಕೊಂಡು ಪ್ರೇಕ್ಷಕರು ವರ್ತಿಸಬೇಕಿತ್ತು ಎನ್ನುವುದು ಸಹಜ ಅಪೇಕ್ಷೆ. ಆದರೆ, ಅಂತಹ ಸಾಧ್ಯತೆ ಇಲ್ಲ ಎನ್ನುವುದನ್ನು ಅರಿಯದ ಸರ್ಕಾರದ್ದು ಹೊಣೆಗೇಡಿತನ. 'ಜೀವ ಬಲು ಅಗ್ಗ' ಎಂಬ ನುಡಿಗಟ್ಟಿಗೆ ಇದು ಚೌಕಟ್ಟು ಹಾಕುವ ಹೊತ್ತು.

**ವಿಶಾಖ ಎನ್.**